International Journal of Kannada Research
www.kannadajournal.com

ISSN: 2454–5813
IJSR 2016; 2(4): 144-145
© 2016 IJKS
www.kannadajournal.com
Received: 24-08-2016
Accepted: 25-09-2016

**ರಾಜಶ್ರೀ ಶ್ರೀರಾಮ (ಭುರೆ)**
ಅತಿಥಿ ಉಪನ್ಯಾಸಕಿ ಎಂ. ಎ.
ಸಂಗೀತ ಕೋರ್ಸ ಗುಲಬರ್ಗಾ
ವಿಶ್ವವಿದ್ಯಾಲಯ, ಕಲಬುರಗಿ.

**Correspondence**
**ರಾಜಶ್ರೀ ಶ್ರೀರಾಮ (ಭುರೆ)**
ಅತಿಥಿ ಉಪನ್ಯಾಸಕಿ ಎಂ. ಎ.
ಸಂಗೀತ ಕೋರ್ಸ ಗುಲಬರ್ಗಾ
ವಿಶ್ವವಿದ್ಯಾಲಯ, ಕಲಬುರಗಿ.

# ಡಾ. ಪ್ರಭಾ ಅತ್ರೇಯವರು ಕಂಡ ಅಮೀರ್‌ಖಾನ್‌ರ ವ್ಯಕ್ತಿತ್ವ

**ರಾಜಶ್ರೀ ಶ್ರೀರಾಮ (ಭುರೆ)**

ತಮ್ಮ ಕಾಲದ ಜೊತೆಗೆ ಹೆಜ್ಜೆ ಹಾಕದೆ ಅನೇಕರು ತಮ್ಮ ಜೀವನವನ್ನು ರೂಪಿಸಿಕೊಂಡಿರುವರು. ಸಂಗೀತ ಕ್ಷೇತ್ರದಲ್ಲಿ ಅಮೀರ್‌ಖಾನ್‌ರೂ ಸಹ ತಮ್ಮ ಗಾಯನ ಕಲೆಯ ಜಾಡನ್ನು ಹಿಡಿದು ಜೀವನವನ್ನು ರೂಪಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಇವರ ಇವರ ಗಾಯನ ಕಲೆ ಮುಂದಿನ ಪೀಳಿಗೆಯವರಿಗೂ ಮಾರ್ಗದರ್ಶನ ಗೈಯುವುದರಿಂದ ಇವರ ಗಾಯನ ಕಲೆಗೆ ಕಾಲದ ನಿಯಮವಿರದು.

ಕಲೆಯು ಅನೇಕ ಸಾಂಸ್ಕೃತಿಯ ತರಬೇತಿಯ ಫಲವಾಗಿರುತ್ತದೆ. ಇವು ಕೆಲವು ಪ್ರಜ್ಞೆಯಿಂದ ಉಂಟಾಗಿರುವುದರಿಂದ ಪರಿಣಾಮಾತ್ಮಕವಾಗಿರುತ್ತವೆ. ಅಮೀರ್‌ಖಾನ್‌ರ ಸ್ಥಾನ ಈ ಗಾಯನ ಕ್ಷೇತ್ರದಲ್ಲಿ ಮುಖ್ಯವಾದದ್ದು. ಆದ್ದರಿಂದ ಇವರ ಗಾಯನದಲ್ಲಿ ಕಲೆ ಮತ್ತು ಶಾಸ್ತ್ರದಿಂದ ಕೂಡಿಕೊಂಡಿರುವುದಾಗಿದೆ. ರೋಶನಾರಾ ಬೇಗಮ್, ಬಡೆ ಗುಲಾಮ್ ಅಲಿಖಾನ್, ಬೇಗಮ್ ಅಖ್ತರ್, ಗಾಯಕಿ ನಟಿಯೂ ಆದ ನೂರ್ ಜಹಾನ್ ಇವರೆಲ್ಲರೂ ನನಗಿಷ್ಟವಾದ ಕಲಾವಿದರಾಗಿದ್ದಾರೆ. ನಾನು ಅಮೀರ್‌ಖಾನ್‌ರ ಹೆಸರನ್ನು ಬಹಳ ಸಲ ಕೇಳಿದ್ದೆನಾದರೂ ನೋಡಿರಲಿಲ್ಲ.

೧೯೬೦ರಲ್ಲಿ ಮೊದಲ ಸಲ ಧ್ವನಿ ಮುದ್ರಿಕೆಗಳ ಮುಖಾಂತರ ನಾನು ಖಾನ್ ಸಾಹೇಬರ ಧ್ವನಿಯನ್ನು ಆಲಿಸಿದೆ. ಆಗ ನಾಗಪುರದ ಆಕಾಶವಾಣಿ ಕೇಂದ್ರಕ್ಕೆ ನನ್ನ ವರ್ಗವಾಗಿತ್ತು. ಇವರ ಗಾಯನದ ಪ್ರತಿಯೊಂದು ಅಂಶವು ಭಿನ್ನವಾಗಿತ್ತು. ಇವರ ಗಾಯನದ ಪ್ರತಿಯೊಂದು ಅಂಶವು ಭಿನ್ನವಾಗಿತ್ತು. ಇವರ ಗಾಯನವು ಕಿರಾಣಾ ಘರಾಣಕ್ಕೆ ಸಮೀಪವೆನಿಸಿದ್ದರೂ ಪ್ರತಿಪಾದನೆ ಮಾಡುವಲ್ಲಿ ಭಿನ್ನತೆ ಇತ್ತು. ಇದುವರೆಗೂ ಕೇಳಿರದ ಅನೇಕ ಅಂಶಗಳು ಧ್ವನಿಮುದ್ರಿಕೆಗಳ ಆಲಿಸುವಿಕೆಯಿಂದ ಕಂಡುಕೊಂಡೆನು.

'ಪ್ರಭಾ ತಾಯಿ ತಮ್ಮ ಗಾಯನ ಶೈಲಿ ಬದಲಿಸಿಕೊಂಡಿದ್ದಾರೆ' ಇಂತಹ ಪಿಸು ಮಾತುಗಳಿಂದ ಖಾನ್‌ಸಾಹೇಬರ ಸಂಗೀತದಿಂದ ನಾನು ಪ್ರಭಾವಿತಳಾಗಿದ್ದೆ. ನನ್ನ ಗುರುಗಳು ಸುರೇಶ ಬಾಬು ತಮ್ಮಲ್ಲಿದ್ದುದ್ದೆಲ್ಲವನ್ನು ಕಲಿಸಿದ್ದರು. ಅವರ ನಂತರ ಹೀರಾಬಾಯಿ ನನ್ನ ಗುರುಗಳಾಗಿದ್ದರು. 'ಯಾವುದಾದರೂ ಒಳ್ಳೆಯದು ಎದುರಾದಾಗ ಅದನ್ನು ಸ್ವೀಕರಿಸು' ಎಂಬುದು ನನ್ನ ಗುರುಗಳು ನನಗೆ ನೀಡಿದ ಗುರುಮಂತ್ರವಾಗಿತ್ತು. ಗುರುಗಳು ಹೊರಟು ಹೋದ ಮೇಲೆ ಏಕಲವ್ಯನಂತೆ ಸ್ವಶಿಕ್ಷಣ ಪಡೆಯುವುದು ನನ್ನದಾಗಿತ್ತು. ಏಕಾಕಿ ಇದ್ದುದರಿಂದಲೇ ಯಾವುದೇ ನೂತನ ಕಲೆ, ಕಲಾಭಿವ್ಯಕ್ತಿ ಕಂಡಾಗಲೆಲ್ಲ ಅದನ್ನು ಕಲಿತುಕೊಳ್ಳಲು ನನ್ನ ಮನ ಹಂಬಲಿಸುತ್ತಿತ್ತು. ಈ ಕಾರಣದಿಂದ ಅಮೀರ್ ಖಾನ್‌ರ ಸಂಗೀತದ ಪರಿಕಲ್ಪನೆ ನನ್ನ ಮನಸ್ಸಿಗೆ ಹಿಡಿಸಿತು. ನನ್ನ ಗುರುವಿನ ಸ್ಥಾನ ಬೇರಾರಿಗೂ ಕೊಟ್ಟಿರಲಿಲ್ಲ. ಕೆಲವು ಜನರು ಅಮೀರ್‌ಖಾನ್‌ರ ಸಂಗೀತ ಗಾಯನದ ಪ್ರಭಾವ ನಿಮ್ಮ ಮೇಲೇ ಆಗಿದೆ. ಇವರನ್ನು ನೀವೇಕೆ ಗುರುವೆಂದು ಹೇಳಬಾರದು? ಎಂಬ ಪ್ರಶ್ನೆಗೆ ಸುರೇಶ್ ಬಾಬು ನನ್ನ ಗುರು. ಅಮೀರ್‌ಖಾನ್‌ರು ನನಗೆ ಗುರು ಸಮಾನರು ಎಂದು ಉತ್ತರ ನೀಡಿದೆ.

ಕಿರಾಣಾ ಘರಾಣಾದ ಗಾಯನ ಶೈಲಿ ಮಧ್ಯ ಮತ್ತು ತಾರ ಸಪ್ತಕಗಳಿಗೆ ಸೀಮಿತ. ಖಾನ್ ಸಾಹೇಬರ ಗಾಯಕಿ ಖರ್ಜ ಸಪ್ತಕದ ಮೇಲೆ ಸಂಚರಿಸುತ್ತದೆ. ಖರ್ಜ ಸಪ್ತಕದ ಸ್ವರಗಳ ಹರಿವು ಒರಟು ಮತ್ತು ಶುಷ್ಕ. ಆದಕಾರಣ ಖಾನ್ ಸಾಹೇಬರು ಇದನ್ನು ಕುತನಿ ಹಸಿರು ಹುಲ್ಲಿನಂತೆ ನಯಗೊಳಿಸಿದ್ದರಿಂದಲೇ ಇದರಿಂದ ಅವರಿಗೆ ಹೊರಬರಬೇಕೆನ್ನುವುದು ಅನಿಸಲಿಲ್ಲವಾದ್ದರಿಂದ ಇವರ ಗಾಯಕಿ ತ್ರಿಪರಿಣಾಮ ರೂಪ ಕಂಡಿತು. ಗಾಢ, ಆತ್ಮಾವಲೋಕನ, ಅಂತರ್ಮುಖಿ, ಹೃದಯಸ್ಪರ್ಶಿ, ಅಭಿಜಾತ, ಅತ್ಯುನ್ನತ – ಇವು ಇವರ ಸಂಗೀತಕ್ಕೆ ಅನ್ವಯಿಸುವ ವಿಶೇಷಗಳಾಗಿವೆ. ಇದರೊಂದಿಗೆ ಇವರ ಕಂಠ ಪೂರಕವೂ ಅಲ್ಲದೆ ಆಧ್ಯಾತ್ಮಿಕ ಸ್ಪರ್ಶ, ಜವಾರಿ(ಅನುರಣನ)ಯಿತ್ತು.

ಅಮೀರ್‌ಖಾನ್‌ರ ಪ್ರಥಮ ಸ್ವರ ಗರ್ಭ ಗುಡಿಯಿಂದ ಹೊರ ಬಂದಂತೆ ದೇವಾಲಯದ ಪವಿತ್ರತೆಯನ್ನು ಸೂಚಿಸುತ್ತಿತ್ತು. ಇದು ಶ್ರೋತೃ ವರ್ಗವನ್ನು ಅಂತರ್ಮುಖಿಗೊಳಿಸುತ್ತಾ, ರಾಗದ ಪ್ರತಿ ಸಂದರ್ಭದಲ್ಲಿ ಸ್ವರದ ಸೌಂದರ್ಯದೊಂದಿಗೆ ಹೊರ ಹೊಮ್ಮುತ್ತಿತ್ತು. ಸರ್ವ ದೃಷ್ಟಿಯಿಂದ ಆಲಾಪ್ ಮತ್ತು ತಾನ್‌ಗಳ ನಡುವಣ ಸರಗಮ್ ಹಾಡುವಿಕೆಯು ಖಾನ್ ಸಾಹೇಬರ ಖಾಸಿಯತ್ (ವೈಶಿಷ್ಟ್ಯ) ಆಗಿತ್ತು. ನನ್ನ ಸಂಗೀತದ ಬದಲಾವಣೆಗೆ ಇದುವೇ ಆಧಾರವಾಗಿತ್ತು. ನಾನು ಇದನ್ನು ಗಾಯನದಲ್ಲಿ ಪ್ರಥಮವಾಗಿ ೧೯೬೦ರ ನಂತರದಲ್ಲಿ ಅಳವಡಿಸಿದೆ. ಇದು ನನಗೆ ಖುಷಿ ಕೊಟ್ಟಿತು. ನಾನು ಸ್ವರಗಳ ಸಂಚಾರವನ್ನು ಗಮನಿಸಿದೆ. ಇದರ ಅರಿವನ್ನು ಪಡೆದುಕೊಂಡೆ. ಇವರು ಸರಗಮ್‌ನ್ನು ಉಚ್ಚಾರ ಮಾಡುವುದನ್ನು, ವೈವಿಧ್ಯತೆ, ಒಂದೇ ಸ್ವರ ವಾಕ್ಯದಲ್ಲಿ ೩ ಸಪ್ತಕಗಳ ಸ್ವರಗಳ ಕಲಾತ್ಮಕ ಜೋಡಣೆ, ಸ್ವರಗಳ ಸಂಚಾರದ ಮೂಲಕ ತಾಲ್‌ದ ಮಾತ್ರೆಗಳ ಮೇಲೆ ನಾಜೂಕಾಗಿ ಕೊಡುವ ಒತ್ತು– ಇವು ಮಂತ್ರ ಮುಗ್ಧಗೊಳಿಸುತ್ತಿತ್ತು.

ಅಮೀರ್‌ಖಾನ್‌ರ ಮತ್ತೊಂದು ವೈಶಿಷ್ಟ್ಯ ಮಧ್ಯಲಯದ ಬಂದಿಶ್‌ಗಳು, ಇದರ ಕಾವ್ಯದ ಆಸ್ವಾದ, ಶಬ್ದೋಚ್ಚಾರ, ಭಾವನಾತ್ಮಕತೆಯನ್ನು ಶ್ರದ್ಧಾಪೂರ್ವಕವಾಗಿ ಹಿಡಿದಿಟ್ಟು ಖಾನ್‌ಸಾಹೇಬರು ಈ ಬಂದಿಶ್‌ನಲ್ಲಿ ಭಿನ್ನತೆಯನ್ನು ತಾಳಿದರು. ಅಲ್ಲದೆ ಸ್ವರಚಿತ ಬಂದಿಶ್‌ಗಳನ್ನು ಹಾಡಿದರು. ಸರ್ವಾಂಗ ಸುಂದರದಿಂದ ಇವುಗಳ ವರ್ಣನೆ ಮಾಡುವ ಒಂದೇ ಒಂದು ಗುಣವಾಚಕವಾಗಿದೆ. ಕಾವ್ಯ ಗುಣ, ಸಂಗೀತಾಕೃತಿ, ಗತಿಯ ಕಲಾತ್ಮಕ ಬಳಕೆ – ಈ ೩ ಆಯಾಮಗಳಲ್ಲಿ ಇವರ ಬಂದಿಶ್‌ಗಳು ಪ್ರಮುಖವಾದವುಗಳು.

ಸಾರ್ವಜನಿಕ ಸ್ಥಳಗಳಲ್ಲಿ ಇವರು ಖ್ಯಾಲ್ ಮಾತ್ರ ಹಾಡುವರು. ಒಂದು ರಾಗ ಮುಗಿಯುತ್ತಿದ್ದಮತೆಯೇ ತಡಮಾಡದೆ ಇನ್ನೊಂದನ್ನು ಮುಂದುವರೆಸುತ್ತಿದ್ದರು. ಇದು ಖಾನ್‌ಸಾಹೇಬರ ಗಾಯನ ಕ್ರಮವಾಗಿತ್ತು. ಅಲ್ಲದೆ ಇವರು ತಬಲಾ ಪ್ರವೀಣರೆಂಬುದು ಬಹಳ ಜನರಿಗೆ ಗೊತ್ತಿರಲಿಲ್ಲ. ಗಾಯನ ಸಮಯದಲ್ಲಿ ಇದು ಪ್ರತಿಫಲನಗೊಳ್ಳುವುದು. ಇವರ ಗತಿ ನಿರ್ವಹಣೆ ಸೂಕ್ಷ್ಮ, ಬುದ್ಧಿವಂತ ಹಾಗು ಪರಿಣಾಮಕಾರವಾಗಿತ್ತು.

ಇವರ ಗಾಯನ ಶೈಲಿ ಕಣ್ಣು ಕೋರೈಸುವಂಥದ್ದಲ್ಲ. ಕ್ರಮೇಣ ಹಾಡುತ್ತಲೇ ಶರಣಾಗತಿ, ಧ್ಯಾನ ಸಮಾಧಿಗೆ ಜನರನ್ನು ಕೊಂಡುಯ್ಯುತ್ತಿದ್ದರು. ಇವರು ಆಳ ಚಿಂತನೆ, ಕಲಾತ್ಮಕ ದರ್ಶನಉಳ್ಳ ಕಲಾವಿದರಾಗಿದ್ದರು. ಹೀಗೆ ಸಂಗೀತ ಕ್ಷೇತ್ರದಲ್ಲಿ ಇವರ ಕೊಡುಗೆ ಚಿರಸ್ಮರಣೀಯವಾಗಿದೆ.